ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Wednesday, 24th March 1976/Chaitra 4, 1898 S.E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA) in the Chair]

STARRED QUESTIONS
(to which Oral Answers were given)

ವೆಸ್ಟರನ್ ಇಂಡಿಯಾ ಮ್ಯಾಚ್ ಕಂಪನಿಯವರೊಂದಿಗೆ ಮಾಡಿಕೊಂಡ ಒಪ್ಪಂದ

೧೫೫. ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ಪಯೆಯಿಟ್ಟು ತಿಳಿಸುವರೆ.—

(ಅ) ಕರ್ನಾಟಕ ಸರ್ಕಾರವು ಯಾವ ವರ್ಷ ವೆಸ್ಟರನ್ ಇಂಡಿಯಾ ಮ್ಯಾಚ್ ಕಂಪನಿಗೆ ಮೆದು ಮರಗಳನ್ನು ಕೊಡಲು ಕರಾರು ಮಾಡಿಕೊಂಡಿದೆ ಮತ್ತು ಸದರಿ ಕರಾರಿನ ನಕಲನ್ನು ಸದನದ ಮುಂದೆ ಇಡಲಾಗುವುದೆ ;

(ಆ) ಒಪ್ಪಂದ ಆದ ಪ್ರಕಾರ ಸದರಿ ಕಂಪನಿಯವರು ರಾಜ್ಯದಲ್ಲಿ ಕಾರ್ಖಾನೆ ಸ್ಥಾಪನೆ ಮಾಡ ಬೇಕೆಂದು ಷರತ್ತು ಇರುವುದು ನಿಜವೇ : ಹಾಗಿದ್ದರೆ ಸದರಿ ಕಂಪನಿಯವರು ಈವರೆಗೆ ಕಾರ್ಖಾನೆ ಸ್ಥಾಪನೆ ಮಾಡದೇ ಇರುವುದರಿಂದ ಕರಾರನ್ನು ರದ್ದುಪಡಿಸಲು ಸರಕಾರ ಏಕೆ ಕ್ರಮ ಕೈಗೊಂಡಿಲ್ಲ ;

(ಇ) ಕರಾರು ಪ್ರಕಾರ ಸದರಿ ಕಂಪನಿಯವರು ತೆಗೆದ ಮರಗಳಲ್ಲಿ ಉಳಿಯುವ ಕೊಂಬೆಗಳನ್ನು ಸದರಿ ಕಂಪನಿಯವರೇ ಗೊತ್ತಾದ ದರದಲ್ಲಿ ತೆಗೆದುಕೊಳ್ಳಬೇಕೆಂದು ಷರತ್ತು ಇರುವುದು ನಿಜವೇ, ಹಾಗಿದ್ದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಮೊತ್ತದ ಮರದ ಕೊಂಬೆಗಳನ್ನು ಸದರಿ ಕಂಪನಿಯವರು ತೆಗೆದುಕೊಂಡಿದ್ದಾರೆ ಮತ್ತು ಆ ಬಗ್ಗೆ ಪ್ರತಿ ವರ್ಷ ಕೊಟ್ಟ ಹಣ ಎಷ್ಟು;

(ಈ) ಸದರಿ ಕಂಪನಿಯವರು ಷರತ್ತು ಪ್ರಕಾರ ಮರದ ಕೊಂಬೆಗಳನ್ನು ತೆಗೆದುಕೊಂಡು ಹೋಗದೆ ಅವು ಕಾಡಿನಲ್ಲಿ ಹಾಳಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ, ಸರಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ;

(ಉ) ಸದರಿ ಕಂಪನಿಯವರು ಕರಾರಿನ ಷರತ್ತು ಪ್ರಕಾರ ಮೆದುಮರಗಳನ್ನು ರಾಜ್ಯದಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ವ್ಯಾಪಾರಮಾಡಬಾರದೆಂದು ನಿಯಮ ಇರುವುದು ನಿಜವೇ,

(ಊ) ಹಾಗಿದ್ದರೆ, ಅದಕ್ಕೆ ವಿರೋಧವಾಗಿ ಕಂಪನಿಯವರು ಮೆದುಮರ ಮಾರಾಟ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ. ಎನ್ ಪಾಟೀಲ್.—(ಅರಣ್ಯ ಮಂತ್ರಿಗಳು)

(ಅ) ೯-೨-೧೯೬೫ ರಂದು ರುಜುಮಾಡಿರುವ ಒಪ್ಪಂದವು ೩೧-೧೨-೧೯೮೭ ರವರೆಗೆ ಜಾರಿಯಾಲ್ಲಿರುತ್ತದೆ. ಸದರಿ ಒಪ್ಪಂದದ ಪ್ರತಿಯನ್ನು ಸಭೆಯ ಮುಂದಿಡಲಾಗಿದೆ.

(ಆ) ನಿಜವಲ್ಲ. ಆದುದರಿಂದ ಒಪ್ಪಂದವನ್ನು ರದ್ದುಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

(ಇ) ಒಪ್ಪಂದದಲ್ಲಿ ಅಂಥ ಯಾವ ಷರತ್ತು ಇರುವುದಿಲ್ಲ

(ಈ) ಇಂಥ ಯಾವ ಷರತ್ತು ಇಲ್ಲದಿದ್ದಾಗ್ಯೂ, ಕಂಪನಿಯವರು ವಹಿಸಿದ ವೆಚ್ಚವನ್ನು ಪಾವತಿ ಮಾಡುವುದಕ್ಕೊಳಪಟ್ಟು ಅವರಿಗೆ ಬೇಕಾಗದಿರುವ ಸರಕನ್ನು ರಸ್ತೆ ಬದಿಯಲ್ಲಿರುವ ಅರಣ್ಯ ಡಿಪೋಗಳಿಗೆ ತಂದು ಒಪ್ಪಿಸುವಂತೆ ಒತ್ತಾಯಪಡಿಸಲಾಗುತ್ತಿದೆ.

(ಉ) ನಿಜ. ಮರದ ತೊಗಟೆಯನ್ನು ಸುಲಿಯಲು ಆದರು ತಂದ ಸರಕು ಉಪಯೋಗಕ್ಕೆ ಬಾರದಿದ್ದಲ್ಲ ಪ್ರಧಾನ ಅರಣ್ಯಾಧಿಕಾರಿಗಳು ಅದನ್ನು ಮಾರಾಟಮಾಡಲು ಅಧಿಕಾರ ನೀಡ ಬಹುದೆಂಬ ನಿಯಮವಿದೆ.

(ಊ) ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ೯-೨-೧೯೬೫ರಲ್ಲಿ ೩೧-೧೨-೧೯೮೭ರವರೆಗೆ ವಾಯಿದೆ ಇರತಕ್ಕ ಕರಾರನ್ನು ಮಾಡಿಕೊಂಡಿದ್ದೀರಿ. ಈ ರೀತಿ ಹಿಂದೆ ಅವರಿಗೆ ಕರಾರು ಯಾವಾಗ ಮಾಡಿ ಕೊಟ್ಟಿದ್ದೀರಿ. ಮತ್ತು ಅದು ಯಾವಾಗ ಪೂರೈಸುತ್ತದೆ ?

† ಶ್ರೀ ಸಿ. ಎನ್. ಪಾಟೀಲ್.—೯-೨-೧೯೬೫ರ ಅಗ್ರಿಮೆಂಟ್‌ನಲ್ಲಿ ವಿಮಕೊ ಕಂಪೆನಿಗೆ ಎಂದು ಎಂಟ್ರಿಯಾಗಿದೆ. ೧೯೫೮ ರಿಂದ ೧೯೬೫ ರವರೆಗೆ ಸರ್ಕಾರ ಪೂರೈಸಿದೆ, ಅದಕ್ಕೆ ಅಗ್ರಿಮೆಂಟ್ ಆಗಿರಲ್ಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಗ್ರಿಮೆಂಟ್ ಆಗದೇ ಹೋಗಿದ್ದರೂ ಕೂಡ ಅವರು ಯಾವ ಆಧಾರದ ಮೇಲೆ ಮರ ತೆಗೆದುಕೊಳ್ಳುತ್ತಾ ಇದ್ದರು?

ಶ್ರೀ ಸಿ. ಎನ್. ಪಾಟೀಲ್.—೧೯೫೮ ರಿಂದ ೧೯೬೫ ರವರೆಗೆ ಪ್ರತಿ ವರ್ಷ ಸರ್ಕಾರದ ಜೊತೆಯಲ್ಲಿ ವ್ಯವಹರಿಸಿ, ಒಂದು ಅಗ್ರಿಮೆಂಟ್‌ಗೆ ಬಂದು ಮರ ತೆಗೆದುಕೊಳ್ಳುತ್ತಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟು ದೊಡ್ಡ ಪ್ರಮಾಣದಲ್ಲಿ ಅಗ್ರಿಮೆಂಟ್ ಇಲ್ಲದೇ ಹೋದರೂ ಕೂಡ ಮರ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಲ್ಲ, ಇಷ್ಟು ಪ್ರಮಾಣದ ಮರ ತೆಗೆದು ಕೊಳ್ಳಬೇಕು ಎಂದು ಸರ್ಕಾರ ಆಜ್ಞೆ ಮಾಡಿತ್ತೇ ಸ್ವಾಮಿ? You have admitted that there was no agreement in so far as the transaction is concerned. We want to know what was the quantity allotted and at what rate ?

SRI C. N. PATIL.—Whatever the quantity that was required by the Company was agreed to and allotted at the agreed price between the Government and the Company.

SRI ABDUL KHUDUS ANWAR.—Have you not fixed any price for each supply you made ?

SRI C. N. PATIL.—Every year the Company used to negotiate with the Government and the Government used to prescribe the rate.

SRI ABDUL KHUDUS ANWAR.—What was the quantity prescribed last year?

SRI C. N. PATIL.—I do not have those figures.

---

† Asterisks indicate that remarks or speeches have not been revised by the member concerned.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಇಂತಹ ದೊಡ್ಡ ಕಂಪನಿಗೆ ದೊಡ್ಡ ಪ್ರಮಾಣದಲ್ಲಿ ವ್ಯವಹಾರ ಆಗುವುದನ್ನು ನಿರ್ಧಾರ ಮಾಡುವಾಗ, ಪ್ರತಿ ವರ್ಷ ಇಷ್ಟು ಕೊಡಬೇಕು ಎಂದು ನಿರ್ಧಾರ ಮಾಡಿಕೊಳ್ಳದೆ ಮತ್ತು ಯಾವ ದರದಲ್ಲಿ ಕೊಡಬೇಕು ಎಂದೂ ನಿರ್ಧಾರ ಮಾಡಿಕೊಳ್ಳದೆ ಕೊಟ್ಟಿರುವುದರಿಂದ ಸರ್ಕಾರಕ್ಕೆ ಲುಕ್ಸಾನು ಆಗುವುದಿಲ್ಲವೇ?

ಶ್ರೀ ಸಿ. ಎನ್. ಪಾಟೀಲ್.—ಲೇಟೆಸ್ಟ್ ಅಗ್ರಿಮೆಂಟ್‌ನಲ್ಲಿ ರೇಟ್ಸ್ ಕವರ್ ಮಾಡಿದೆ. ಎರಡು ವರೈಟಿ ಸಾಫ್ಟ್ ವುಡ್ ಮರಗಳನ್ನು ಕೊಟ್ಟಿದೆ. ತಾವು ಕಳೆದ ೫ ವರ್ಷದಲ್ಲಿ ಎಷ್ಟಾಯಿತು ಎಂದು ಕೇಳಿದ್ದೀರಿ. ೧೯೭೧-೭೨ ರಲ್ಲಿ ೨೩,೨೫೭ ಕ್ಯೂಬಿಕ್ ಮೀಟರ್ ಮರ ಪಡೆದುಕೊಂಡಿದ್ದಾರೆ, ಅದರ ಬೆಲೆ ೧೦ ಲಕ್ಷ, ೫೨ ಸಾವಿರ ೧೧ ರೂಪಾಯಿಗಳು. ೧೯೭೧-೭೨ ರಲ್ಲಿ ೧೯೮೧೦ ಕ್ಯೂಬಿಕ್ ಮೀಟರ್ ಮರ ಡ್ರಾ ಮಾಡಿದರೆ ಅದರ ಬೆಲೆ ೧೦ ಲಕ್ಷದ ೭೭ ಸಾವಿರದ ೩೪೭ ರೂಪಾಯಿಗಳು. ೧೯೭೨-೭೩ ರಲ್ಲಿ ೧೮,೪೯೭ ಘನ ಮೀಟರ್ ಡ್ರಾ ಮಾಡಿದ್ದಾರೆ, ಅದರ ಬೆಲೆ ೧೦ ಲಕ್ಷದ ೩೦೪ ರೂಪಾಯಿಗಳು ೧೯೭೩-೭೪ ರಲ್ಲಿ ೨೨,೬೯೮ ಘನ ಮೀಟರ್ ಡ್ರಾ ಮಾಡಿದ್ದಾರೆ ಅದರ ಬೆಲೆ ೧೩ ಲಕ್ಷದ ೭೨ ಸಾವಿರದ ೧೧೪ ರೂಪಾಯಿಗಳು. ೧೯೭೪-೭೫ ರಲ್ಲಿ ೨೨,೬೨೪ ಕ್ಯೂಬಿಕ್ ಮೀಟರ್ ಡ್ರಾ ಮಾಡಿದ್ದಾರೆ ಅದರ ಬೆಲೆ ೧೪ ಲಕ್ಷದ ೩೯ ಸಾವಿರದ ೫೮೦ ರೂಪಾಯಿಗಳು. ಇದು ಕಳೆದ ೫ ವರ್ಷದ್ದು.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಆ ಕಂಪೆನಿಗೆ ಅಗ್ರಿಮೆಂಟ್ ಮಾಡಿದ್ದರಲ್ಲ, ಇದರಿಂದ ಸರ್ಕಾರಕ್ಕೆ ಸಾಕಷ್ಟು ಲುಕ್ಸಾನು ಆಗುತ್ತಾ ಇದೆ ಎಂದು ತಮಗೆ ಗೊತ್ತಿದ್ದರೂ ಕೂಡ ಮಾಡಿದ್ದೀರಿ ಮತ್ತು ೫ ವರ್ಷಕ್ಕಾದರೂ ಮಾಡಬೇಕಲ್ಲವೇ ೧೯೭೭ ನೇ ಇಸವಿವರೆಗೆ ಅಗ್ರಿಮೆಂಟ್ ಮಾಡಿರುವುದು ಸರ್ಕಾರದ ಆದಾಯದ ದೃಷ್ಟಿಯಿಂದ ಅನ್ಯಾಯವಲ್ಲವೇ ಸ್ವಾಮಿ?

ಶ್ರೀ ಸಿ. ಎನ್. ಪಾಟೀಲ್.—ಅರಣ್ಯ ಪ್ರದೇಶದ ರಾ ಮೆಟೀರಿಯಲ್ ಅನ್ನು ಎಲ್ಲಾ ಕಂಪನಿಗಳಿಗೂ ಸರಬರಾಯಿ ಮಾಡುತ್ತಿದ್ದೇವೆ. ಕೆಲವು ಕಂಪನಿಗಳವರು ಲಾಂಗ್ ಲೀಸ್ ಮಾಡಿಕೊಂಡಿದ್ದಾರೆ. ಇದನ್ನು ನ್ಯಾಷನಲೈಸ್ ಮಾಡುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಪರಿಶೀಲನೆ ಮಾಡಬೇಕು ಮತ್ತು ಇದರ ಬಗ್ಗೆ ಯೋಗ್ಯ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಮರಗಳಿಂದ ದಿಮ್ಮಿಗಳಿಂದ ಲಾಗ್ಸ್ ತೆಗೆಯುತ್ತಾರೆ. ಅದರಲ್ಲಿ ಉಳಿದಿರತಕ್ಕ ಲಾಪ್ಸ್ ಮತ್ತು ಟಾಪ್ಸ್ ಅನ್ನು ಯಾರು ಪಡೆಯಬೇಕು ಎನ್ನುವುದರ ಬಗ್ಗೆ ಹೊಸದಾಗಿ ಮಾಡಿಕೊಂಡಿರತಕ್ಕ ಅಗ್ರಿಮೆಂಟಿನಲ್ಲಿ ಯಾವ ನಿಭಂದನೆಯೂ ಇಲ್ಲ. ಇದನ್ನು ಯಾರು ತೆಗೆದುಕೊಂಡು ಹೋಗಬೇಕು ಮತ್ತು ಇದಕ್ಕೆ ಯಾರು ಜವಾಬ್ದಾರರು ?

ಶ್ರೀ ಸಿ ಎನ್. ಪಾಟೀಲ್.—ಈಗ ಎರಡು ವರ್ಷಗಳಿಂದ ವಿಮ್‌ಕೋ ಫ್ಯಾಕ್ಟರಿಯವರಿಗೆ ಲಾಪ್ಸ್ ಮತ್ತು ಟಾಪ್ಸ್ ಅನ್ನು ರೋಡ್ ಪಕ್ಕಕ್ಕೆ ಗುಡ್ಡೆ ಹಾಕಿ ಕೊಡಬೇಕು ಎನ್ನುವ ನಿಭಂದನೆಯನ್ನು ಹಾಕುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಅಗ್ರಿಮೆಂಟಿನಲ್ಲಿ ಕಾಂಟೆಂಪ್ಲೇಟ್ ಆಗಿಲ್ಲ.

ಶ್ರೀ ಸಿ. ಎನ್. ಪಾಟೀಲ್.—ಅದನ್ನು ನಾನೂ ಒಪ್ಪುತ್ತೇನೆ. ವಿಮ್ಕೋ ಫ್ಯಾಕ್ಟರಿಯವರು ಸುಮಾರು ೧೯೨೧ ಕ್ಯೂಬಿಕ್ ಮೀಟರ್ ಮರವನ್ನು ರೋಡ್ ಸೈಡಿಗೆ ತಂದು ಕೊಟ್ಟಿದ್ದಾರೆ. ಇದನ್ನು ನಾವು ಸ್ಕೂಲ್ ಸ್ಕೇಲ್ ಇಂಡಸ್ಟ್ರೀಸ್ ಅವರಿಗೆ ಪ್ಯಾಕಿಂಗ್ ಕೇಸ್ ಮಾಡುವುದಕ್ಕೋಸ್ಕರ ಒಂದು ಕ್ಯೂಬಿಕ್ ಮೀಟರ್‌ಗೆ ರೂ. ೧೭-೫೦ ಪೈಸೆಯಂತೆ ಕೊಡುತ್ತಿದ್ದೇವೆ.

ಅಧ್ಯಕ್ಷರು : —ಪ್ರಶ್ನೆ ನಂಬರ್ಸ್ ೩೩೮, ೪೫೬ ಮತ್ತು ೫೦೯ ಒಂದೇ ರೀತಿಯಿರುವುದರಿಂದ ಈ ಪ್ರಶ್ನೆಗಳನ್ನು ಒಟ್ಟಿಗೆ ಕೇಳಬಹುದು.

Old Age Pension

338. C. NAGAMMA KESHAVAMURTHY (Davanagere) :—Will the Minister for Finance and Housing be pleased to state :—

(*a*) the number of old age pensions sanctioned in the State (Districtwise figures may be given) ;